ಅದ್ಕೆ ಇಲ್ಲದ ಹೆಂಡತಿ ಮಕ್ಕಳನ್ನು ಸೃಷ್ಟಿಸಿದೆ. ಖುಷಿಯಾಗಿದೀನಿ ಅಂತ ತೋರಿಸಿಕೊಂಡೆ. ಇನ್ಕೇಸ್ ಅವಳಿಗೆ ನಾನು ಹೀಗೆ ಒಂಟಿಯಾಗಿ ಬದುಕ್ತಿದೀನಿ ಅಂತ ಗೊತ್ತಾದರೆ, ಅವಳ ಮನಸ್ಸಿನಲ್ಲೂ ಗಿಲ್ಟ್ ಬರುತ್ತೆ. ನನ್ನ ಜೀವನ ಹೀಗಾಗೋಕೆ ತಾನೇ ಕಾರಣ ಆದೆ ಅಂತ ಅವಳು ನೋವು ಪಡೋದು ಬೇಡ. ಅವಳಾದ್ರೂ ಖುಷಿಯಾಗಿರಲಿ' ಎಂದ.

'ಯಾರು ನಿನಗೆ ಅಶೋಕ ಅಂತ ಹೆಸರು ಇಟ್ರೋ ಮಾರಾಯ ಬರೀ ಶೋಕವೇ. ಇನ್ನಾದರೂ ಬದುಕಲ್ಲಿ ಮೂವ್ ಆನ್ ಆಗು. ಅವಳನ್ನು ನೋಡಿದ್ಯಲ್ಲ'

ಅಶೋಕ ಏನೂ ಪ್ರತಿನುಡಿಯಲಿಲ್ಲ.

'ದೇವ್ರೂ, ಯಾಕೆ ಅಷ್ಟೊಂದು ನಾಟಕ ಮಾಡಿದೆ? ಬಹಳ ಒಳ್ಳೆಯ ಗಂಡ, ಎರಡು ಮಕ್ಕಳು, ರಾಯಲ್ ಲೈಫು? ಯಾಕೆ ಇಷ್ಟೊಂದು ಸುಳ್ಳು?'

'ಮತ್ತಿನ್ನೇನೆ? ಮಕ್ಕಳು ಹೊಟ್ಟೆಯಲ್ಲೇ ಲೋಕ ಬಿಟ್ವು ಅಂತ ಹೇಳೋದಾ? ಗಂಡ ಸ್ಯಾಡಿಸ್ಟ್ ಅಂತ ಹೇಳೋದಾ? ಅವನಿಂದಾಗಿಯೇ ಪ್ರತೀ ಬಾರಿ ಮಗುವನ್ನು ಕಳ್ಕೊಂಡೆ ಅನ್ನೋದಾ? ಅಬಾರ್ಷನ್ ಆಗೀ ಆಗೀ ದೇಹ ಈ ಸ್ಥಿತಿಗೆ ತಲುಪಿದೆ ಅಂತ ಹೇಗೆ ಹೇಳೋದೇ? ಇವನ ಈ ಬುದ್ಧಿಯಿಂದಾಗಿ ಅತ್ತೆ ಮಾವ, ಅಪ್ಪ ಅಮ್ಮ, ಬಂಧು ಬಳಗ ಯಾರೂ ಮನೆಗೆ ಬರಲ್ಲ. ಹಾಗಾಗಿ ಯಾರ ಕಾಟವೂ ಇಲ್ಲ ಅಂತ ಹೇಳೋದಾ? ಎಲ್ಲಿ ಹೋದೆ ಕೇಳಲ್ಲ, ಏನು ತಗೊಂಡೆ ಅನ್ನಲ್ಲ, ಬದ್ಧಿದೀಯಾ ಸತ್ತಿದೀಯಾ ಅಂತ ಕೇಳಲ್ಲ. ಅಷ್ಟು ಸ್ವಾತಂತ್ರ್ಯ ಕೊಟ್ಟಿದಾನೆ. ಇದ್ನೆಲ್ಲ ಹೇಳೋಕಾಗತ್ತಾ? ನಾನು ಹೇಳುವ ಸುಳ್ಳು ಅಶೋಕನ ಬದುಕನ್ನು ಬದಲಾಯಿಸತ್ತೆ ಅಂತಾದ್ರೆ ನಾನು ಸುಳ್ಳನ್ನೇ ಹೇಳ್ತೀನಿ. ಅದೇ ನಿರ್ಧಾರದಲ್ಲಿ ಇಲ್ಲಿಗೆ ಬಂದಿದ್ದು.'

'ಅಶೋಕನ ಬದುಕು? ಏನಾಗಿದೆ? ಅರಾಮಿದಾನಲ್ಲ ಅವನು?' ನಳಿನಿಗೆ ಆಶ್ಚರ್ಯವಾಯಿತು.

'ನಳಿನೀ, ನಿನಗೊಂದು ವಿಷಯ ಹೇಳ್ಲಾ? ಅಶೋಕ ಮದುವೆ ಆಗಿಲ್ಲ. ನನ್ನೆದುರು ಖುಷಿಯಾಗಿದೀನಿ ಅಂತ ತೋರಿಸ್ಕೊಳೋಕೆ ಹಾಗೆ ಹೇಳ್ದ ಅಷ್ಟೇ. ಆಕ್ಚುಯಲಿ ಇವತ್ತು ನಡೆದದ್ದು ಪೂರ್ತೀ ಪ್ರೀ ಪ್ಲಾನ್. ಅವನನ್ನು ಮೀಟ್ ಆಗಲೇಬೇಕು ಅಂತ ದಿವಾಕರ ಹೇಳ್ದ. ಹಾಗಾಗಿ ಹತ್ತು ವರ್ಷಗಳ ನಂತರ ನಾನು ಈ ಜಾತ್ರೆಗೆ ಬಂದೆ. ಇಲ್ದಿದ್ರೆ ಮದುವೆಯಾಗಿ ಬಾಂಬೆಗೆ ಹೋದವಳು ಯಾವಾಗಲಾದರೂ ಜಾತ್ರೆಗೆ ಬಂದಿದ್ದಿದೆಯಾ? ನನ್ನವರು ಯಾರೂ ಇಲ್ಲದ ಈ ಊರಿಗೆ ನಾನು ಯಾಕೆ ಬರಲಿ ಹೇಳು?'

'ಅಂದ್ರೆ?'

'ಅಶೋಕ ಹೀಗೆ ಒಂಟಿಯಾಗಿದಾನೆ ಅನ್ನೋದು ನನಗೂ ಗೊತ್ತಿರಲಿಲ್ಲ. ಮೂರು ತಿಂಗಳ ಹಿಂದೆ ಒಂದು ಮದುವೆಯಲ್ಲಿ ದಿವಾಕರ ಸಿಕ್ಕಿದ್ದ. ಆಗ ವಿಷಯ ಗೊತ್ತಾಯ್ತು. ಅವನಿನ್ನೂ ಹಳೆಯ ಪ್ರೇಮವನ್ನೇ ಮನಸ್ಸಲ್ಲಿ ಇಟ್ಕೊಂಡಿದಾನೆ. ಬದುಕು ನಿಂತ ನೀರಾಗಿದೆ ಅಂತ. ನಾನು ಬದುಕಲ್ಲಿ ಅನಿವಾರ್ಯವಾಗಿ ಮೂವ್ ಆನ್ ಆದೆ. ಸಕ್ಸೆಸ್ ಸಿಗಲಿಲ್ಲ, ಖುಷಿಯೂ ಇಲ್ಲ. ನೆಮ್ಮದಿಯೂ ಇಲ್ಲ. ಆದರೂ ಏನೋ ಒಂಥರ ಬದುಕ್ತಿದೀನಿ. ಅವನನ್ನು ಮರೆತೇಬಿಟ್ಟೆ ಅಂತನೂ ಅಲ್ಲ. ಎಲ್ಲೋ ತಂಗಾಳಿ ಬೀಸಿದ ಹಾಗೆ ನೆನಪಾಗ್ತಾನೆ. ಆದರೆ ಅಶೋಕ ಹಾಗೆ ಮಾಡಲಿಲ್ಲ. ನನ್ನ ನೆನಪಲ್ಲೇ ದಿನ ಕಳೀತಾ ಇದಾನೆ ಅಂತ ಗೊತ್ತಾಯ್ತು. ಅವನ ಈ ಒಂಟಿ ಬದುಕಿಗೆ ನಾನು ತಾನೇ ಕಾರಣ? ಹಾಗಾಗಿ ಅವನಿಗೆ ಅನುಮಾನ ಬಾರದ ಹಾಗೆ ಅಚಾನಕ್ಕಾಗಿ ಭೇಟಿಯಾದಂತೆ ಆಗಲಿ ಅಂತ ದಿವಾಕರ ನಾನು ಸೇರಿ ಈ ಪ್ಲಾನ್ ಮಾಡಿದ್ದು. ಅದೇ ಪ್ರಕಾರ ಇವತ್ತು ಭೇಟಿಯಾದ್ವಿ. ಇನ್ಮೇಲಾದ್ರೂ ಅವನು ಮದುವೆ, ಸಂಸಾರ ಅಂತ ಖುಷಿಯಾಗಿದ್ರೆ ಅಷ್ಟೇ ಸಾಕು.'

ನಳಿನಿಗೆ ಏನು ಹೇಳುವುದೋ ತೋಚಲಿಲ್ಲ.

ನಳಿನಿಯ ಮನೆಯ ಹತ್ತಿರ ಆಟೊ ನಿಂತಿತು. ಹಣ ಕೊಡಲು ದೇವಯಾನಿ ಬ್ಯಾಗ್ ತೆರೆದಳು. ಕೈಗೆ ಸಿಕ್ಕಿದ್ದು ಒಂದು ಪುಟ್ಟ ಪ್ಯಾಕೆಟ್. ಮುಟ್ಟುತ್ತಲೇ ಗೊತ್ತಾಯಿತು. ತಾನೇ ಆರಿಸಿದ್ದ ಅಶೋಕ ಕೊಂಡಿದ್ದ ಜುಮುಕಿಗಳು ಅದರಲ್ಲಿವೆ ಎಂದು. ವಿಷಾದದ ನಗುವೊಂದು ತುಟಿಯ ಮೇಲೆ ಹಾದು ಹೋಯಿತು.

■


ಪ್ರಬಂಧದ ಅನುಬಂಧ
ಯುಗಾದಿಯ ಸಂಬಂಧ

# ಸುಧಾ

ಯುಗಾದಿ ವಿಶೇಷಾಂಕ-2025

## ಓದುಗರ ವೇದಿಕೆ

**ಕೊನೆಯ ದಿನಾಂಕ**
**ಫೆ.5, 2025**

ಪ್ರಿಯ ಓದುಗರ ಸಹಭಾಗಿತ್ವ ಇಲ್ಲದೆ 'ಯುಗಾದಿ ಸಂಚಿಕೆ' ಕಳೆಗಟ್ಟುವುದು ಹೇಗೆ?
ಇದೋ ಇಲ್ಲಿದೆ, ಓದುಗರ ಅಭಿವ್ಯಕ್ತಿಗೊಂದು ಆಹ್ವಾನ.

### ವಧು-ವರಾನ್ವೇಷಣೆ: ಅನುಭವ ಸ್ವಾರಸ್ಯ

ವಧು ಅಥವಾ ವರನ ಹುಡುಕಾಟ ಪ್ರತಿಯೊಬ್ಬರ ಜೀವನದಲ್ಲೂ ಸಂಭವಿಸುವಂತಹದ್ದು. ಸಂಗಾತಿಯ ಹುಡುಕಾಟದ ಸಂದರ್ಭ ಮಧುರ ಕ್ಷಣಗಳಿಗೆ, ಸ್ವಾರಸ್ಯಕ್ಕೆ ಇಲ್ಲವೇ ಮುಜುಗರಕ್ಕೆ ಕಾರಣವಾಗಿರಬಹುದು. ಬೆಲ್ಲ–ಬೇವಿನಂತಹ ವಿಶೇಷ ಕ್ಷಣಗಳನ್ನು 'ಸುಧಾ' ಓದುಗ ಬಳಗದೊಂದಿಗೆ ಪುಟ್ಟದಾಗಿ ಹಂಚಿಕೊಳ್ಳಬಹುದು. ಸಾಂಪ್ರದಾಯಿಕ ಹುಡುಗ–ಹುಡುಗಿ ಭೇಟಿ ಮಾತ್ರವಲ್ಲ, ಆನ್‌ಲೈನ್‌ನ 'ಮ್ಯಾಟ್ರಿಮೊನಿ' ಹುಡುಕಾಟ ತಡಕಾಟದ ಅನುಭವಗಳಿಗೂ ಅವಕಾಶವಿದೆ.

### ಆನ್‌ಲೈನ್ ವಂಚನೆಯ ವಿಶ್ವರೂಪ

ಮೊಬೈಲ್ ಹೊಂದಿದ ಮೇಲೆ ವಂಚನೆಗೆ ಒಳಗಾಗದಿರಲು ಸಾಧ್ಯವೆ? ದೊಡ್ಡದೋ ಸಣ್ಣದೋ ಪ್ರತಿಯೊಬ್ಬರೂ ಒಂದಲ್ಲಾ ಒಂದು ಸಂದರ್ಭದಲ್ಲಿ ವಂಚನೆಗೆ ಒಳಗಾಗಿಯೇ ಇರುತ್ತಾರೆ; ಕೆಲವರು ವಂಚನೆಯ ಹೊಸ್ತಿಲವರೆಗೂ ಹೋಗಿ ಕೂದಲೆಳೆಯಿಂದ ಪಾರಾಗಿರುತ್ತಾರೆ. ಹೀಗೆ ವಂಚನೆಗೊಳಗಾದ ಇಲ್ಲವೇ ವಂಚನೆಯಿಂದ ಪಾರಾದ ಪ್ರಸಂಗಗಳನ್ನು ಪುಟ್ಟದಾಗಿ ಬರೆದು ನಮಗೆ ಕಳಿಸಿ. ನಿಮ್ಮ ಅನುಭವಗಳು ಇತರರಿಗೆ ಪಾಠವಾಗಲೂಬಹುದು.

ಮೇಲಿನ ವಿಷಯಗಳಲ್ಲಿ ಯಾವುದರ ಬಗ್ಗೆಯಾದರೂ ಬರೆಯಬಹುದು. ಬರಹಗಳು 250 ಶಬ್ದಗಳ ಮಿತಿಯಲ್ಲಿರಲಿ. ಬರಹದೊಂದಿಗೆ ನಿಮ್ಮ ಭಾವಚಿತ್ರವೂ ಇರಲಿ. ಯುನಿಕೋಡ್, ಬರಹ ತಂತ್ರಾಂಶದಲ್ಲಿ ಬರಹಗಳನ್ನು ಇ-ಮೇಲ್ ಮಾಡಬಹುದು.

**ವಿಳಾಸ:**
**ಸಂಪಾದಕರು, ಸುಧಾ ಯುಗಾದಿ ವಿಶೇಷಾಂಕ**
**ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು 560001**
**ಇಮೇಲ್: ugadi@sudha.co.in**


